# ರಾಜ್ ಬೆನ್ನು ತಟ್ಟಿದಾಗ...

■ ರಿಗ್ರೆಟ್ ಅಯ್ಯರ್, ಬೆಂಗಳೂರು

**ರಾಜಕುಮಾರ್ ಅವರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಜೊತೆಗೆ ಅವರ ಸನಿಹದಲ್ಲೇ ಕ್ರಿಯಾಶೀಲವಾಗುವ ಅವಕಾಶ ನನ್ನ ಜೀವನದಲ್ಲಿ ಬಂದುಹೋಗಿದ್ದು ನನ್ನ ಸುಯೋಗ. ಮೈಸೂರಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ರಾಜಕುಮಾರ್ ಒಂದು ಹರಸಿ ಹಾರೈಸಿದ್ದು ಎಂದಿಗೂ ಮನದಾಳದಲ್ಲಿ ಜೀವಂತವಾಗಿದೆ.**



ಹಳೆಯ ಕನ್ನಡ ಸಿನಿಮಾಗಳನ್ನು ನೋಡಿ ಮೆಲುಕು ಹಾಕುವುದೆಂದರೆ ಅದೇನೋ ಖುಷಿ. ಹಿಂದಿನ ಸಿನಿಮಾ ನಟರೂ ಅಷ್ಟೆ. ನಟ ದಿಗ್ಗಜರ ಜೊತೆಗಿನ ಒಡನಾಟ ಸದಾ ನೆನಪಿನಲ್ಲಿ ಉಳಿಯುವಂಥವು. ವರನಟ ರಾಜಕುಮಾರ್ ಸಿನಿಮಾ ಇಷ್ಟಪಡದವರು ಯಾರಿದ್ದಾರೆ ಹೇಳಿ? ಅವರ ಶ್ರದ್ಧೆ, ನೈಜ ಅಭಿನಯ, ಸುಲಲಿತ ಭಾಷೆ ವಿದ್ವತ್ಪೂರ್ಣ ಸಂಭಾಷಣೆಗಳಿಗೆ ಮನಸೋಲದವರಿಲ್ಲ. ರಾಜ್ ಅಭಿಮಾನಿಗಳಲ್ಲಿ ನಾನೂ ಒಬ್ಬ.

ರಾಜ್ ಚಿತ್ರಗಳನ್ನು ನೋಡುವುದೆಂದರೆ ನನಗೆ ಮೊದಲಿನಿಂದಲೂ ಬಹಳ ಉತ್ಸಾಹ. ನಮ್ಮ ಮನೆಯವರಿಗೂ ಅಷ್ಟೆ. ರಾಜಕುಮಾರ್ ಅಭಿನಯದ ಚಿತ್ರ ಬಂದರೆ ಮೊದಲು ಹೋಗಿ ನೋಡಬೇಕು ಎನ್ನುವ ಬಯಕೆ. ನಾನು ಚಿಕ್ಕವನಿದ್ದಾಗ ನನ್ನ ಅಜ್ಜಿ ಮುನಿಲಕ್ಷ್ಮಮ್ಮ ಅಯ್ಯರ್ ಆವರು ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರು ಮಡಿವಂತಿಕೆ ಆಚರಿಸುತ್ತಿದ್ದರು. ದೇವರು, ಪೂಜೆ ಇತ್ಯಾದಿಗಳಲ್ಲಿ ಬಹಳ ಶ್ರದ್ಧೆ. ಇಂಥದ್ದರಲ್ಲಿ ಆ ಕಾಲದಲ್ಲಿ ರಾಜಕುಮಾರ್‌ರವರು ನಟಿಸಿರುವ ಚಿತ್ರಗಳಾದ ಸತ್ಯಹರಿಶ್ಚಂದ್ರ, ಬೇಡರ ಕಣ್ಣಪ್ಪ ಮುಂತಾದ ಚಿತ್ರಗಳನ್ನು ನೋಡಲು ಹೋಗುತ್ತಿದ್ದಾಗ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಚಿತ್ರಗಳನ್ನು ಬಹಳ ಆಸಕ್ತಿಯಿಂದ ನೋಡುತ್ತಾ ಭಾವುಕರೂ ಆಗುತ್ತಿದ್ದರು.

ಇಂಥ ಚಿತ್ರಗಳನ್ನು ಅವರ ಜೊತೆ ನೋಡುತ್ತಾ ನನಗೂ ರಾಜಕುಮಾರ್‌ರವರ ಅಭಿನಯ, ನಡೆನುಡಿ, ಸರಳ ಜೀವನ ನನ್ನ ಮೇಲೂ ಪ್ರಭಾವ ಬೀರಿತು. ಮುಂದೆ ರಾಜಕುಮಾರ್‌ರವರ ಚಿತ್ರ ಬಿಡುಗಡೆ ಮೊದಲನೇ ದಿನ, ಮೊದಲ ಪ್ರದರ್ಶನ ನೋಡುತ್ತಿದೆ. ಹೀಗೆ ರಾಜಕುಮಾರ್ ಅವರಿಂದ ಪ್ರಭಾವಿತನಾಗಿ ಕೆಲವು ನಾಟಕಗಳಲ್ಲೂ ನಟಿಸಿದ್ದುಂಟು. ಇದಲ್ಲದೆ ರಾಜ್ ಅವರು ಎಲ್ಲಿಯಾದರೂ ಚಿತ್ರೀಕರಣಕ್ಕೆ ಬಂದಿದ್ದರೆ ಅಲ್ಲಿಗೆ ಹೋಗಿ ಅವರ ನಟನೆ ನೋಡಿ ಸಂತೋಷಪಡುತ್ತಿದ್ದೆ. ಬೆಳ್ಳಿಪರದೆಯ ಮೇಲೆ ಅವರ ಅಭಿನಯವನ್ನು ಎಷ್ಟು ನೋಡಿದರೂ ಸಾಲದು. ಅದರಂತೆ ಅವರನ್ನು ನಿಜಜೀವನದಲ್ಲಿ ನೋಡಿ ಕಣ್ತುಂಬಿಕೊಳ್ಳಬೇಕು ಎಂಬ ಆಸೆ ಮನದಲ್ಲಿ ಸದಾ ತುಂಬಿರುತ್ತಿತ್ತು. ನನ್ನ ಆಸೆಗಳನ್ನು ಆಗಾಗ ನಿವಾರಿಸಿಕೊಳ್ಳುತ್ತಲೂ ಇದ್ದೆ.

ಮುಂದೆ ಗೋಕಾಕ್ ಚಳವಳಿಯ ಸಂದರ್ಭದಲ್ಲೂ ಅವರು ಮುನ್ನಡೆಸಿದ ಹೋರಾಟದಲ್ಲೂ ಭಾಗವಹಿಸುವ ಸುಯೋಗ ನನ್ನದಾಯಿತು. ಹೀಗಾಗಿ ಅವರನ್ನು ಅತ್ಯಂತ ಸನಿಹದಿಂದ ನೋಡುವ, ಮಾತನಾಡಿಸುವ ಅವಕಾಶ ಒದಗಿ ಬಂದಿತ್ತು.

ಅದು ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂದರ್ಭ. ಆ ಸಂದರ್ಭದಲ್ಲಿ ನಡೆಯುವ ದಸರಾ ವಸ್ತು ಪ್ರದರ್ಶನದಲ್ಲಿ (ವಿಶ್ವ ಕನ್ನಡ ಸಮ್ಮೇಳನದ ಸಮಯ) ನಾನು ಪ್ರದರ್ಶಿಸಿದ್ದ ಛಾಯಾಚಿತ್ರಗಳು, ವ್ಯಂಗ್ಯಚಿತ್ರಳನ್ನು ವೀಕ್ಷಿಸಲು ರಾಜ್ ಆಗಮಿಸಿದರು. ಆಗ ನನಗೆ ನಂಬಲಾರದ ಸಂತೋಷ. ಚಿತ್ರಗಳನ್ನು ನೋಡಿ 'ಛಾಯಾಚಿತ್ರಗಳು ಚೆನ್ನಾಗಿವೆ, ಹೀಗೆ ಮುಂದುವರಿಸಿರಿ, ಒಳ್ಳೆಯದಾಗಲಿ' ಎಂದು ನನ್ನ ಬೆನ್ನು ತಟ್ಟಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಅವರಿಗೆ ಹಸ್ತಲಾಘವ ಮಾಡುವ ಅದೃಷ್ಟವೂ ಒದಗಿ ಬಂದಿತು. ಆ ಕ್ಷಣವನ್ನು ಒಬ್ಬರು ಚಿತ್ರ ತೆಗೆದರು. ಇಂತಹ ಅದೃಷ್ಟ ಒಲಿದು ಬಂದದ್ದು ನನ್ನ ಅದೃಷ್ಟವೇ ಸರಿ. ಇದನ್ನು ಎಂದೆಂದಿಗೂ ಮರೆಯುವ ಹಾಗಿಲ್ಲ.

ಬರೀ ಕಲ್ಪನಾ ಲೋಕದಲ್ಲಿ ರಾಜ್ ಅಭಿಮಾನಿಯಾಗಿ ಅವರಿಂದ ಮುಂದೆ ಪ್ರಭಾವಿತನಾಗಿರುವುದು ಸವಿ ನೆನಪಿನ ಸಾಲಿನಲ್ಲಿ ಸೇರಿದೆ. ಹೀಗೆ ಅವರ ನಟನೆ, ಸರಳತೆ, ವಿಚಾರಗಳು ನನ್ನ ಮೇಲೆ ಪ್ರಭಾವ ಬೀರಲು ಮೂಲ ಕಾರಣ ನನ್ನ ಅಜ್ಜಿ ಮುನಿಲಕ್ಷ್ಮಮ್ಮ ಅಯ್ಯರ್‌ಗೆ ನಾನು ಸದಾ ಋಣಿ. ■